# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 145 | Pages. 2 | Date: 11-04-2025, FRIDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 145 - ಪುಟಗಳು : 2 - 11 ಏಪ್ರಿಲ್ 2025 ಶುಕ್ರವಾರ | Ph: 8762954248 | ದರ : ₹1


# ಶ್ರವಣಬೆಳಗೊಳದಲ್ಲಿ ಮಾಂಸದಂಗಡಿ ಬೇಡ

## ಮಹಾವೀರ ಜಯಂತಿಯಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಶ್ರವಣಬೆಳಗೊಳ: ಅಹಿಂಸೆಯನ್ನು ಪ್ರಬಲವಾಗಿ ಪ್ರತಿಪಾದಿಸುವ ಶ್ರವಣಬೆಳಗೊಳ ಕ್ಷೇತ್ರದಲ್ಲಿ ಮಾಂಸದಂಗಡಿಗಳಿಗೆ ಕಡಿವಾಣ ಹಾಕಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದರು.

ಪಟ್ಟಣದ ಚಾವುಂಡರಾಯ ಸಭಾ ಮಂಟಪದಲ್ಲಿ ದಿಗಂಬರ ಜೈನ ಮಠದಿಂದ ಗುರುವಾರ ಏರ್ಪಡಿಸಿದ್ದ ಭಗವಾನ್ ಮಹಾವೀರರ 2624ನೇ ಜನ್ಮ ಕಲ್ಯಾಣೋತ್ಸವ ಉದ್ಘಾಟಿಸಿ ಮಾತನಾಡಿದರು.

ಜೈನ ಧರ್ಮ ಅಹಿಂಸೆ ಪ್ರತಿಪಾದಿಸುತ್ತದೆ. ಇನ್ನೊಬ್ಬರಿಗೆ ಹಿಂಸೆ ಮಾಡಬಾರದು. ಮೂಕ ಪ್ರಾಣಿಗಳಿಗೂ ಬದುಕುವ ಹಕ್ಕಿದೆ. ಕ್ಷೇತ್ರದ ಸುತ್ತಲು ಮಾಂಸ ಹಾಗೂ ಮದ್ಯದ ಅಂಗಡಿಗಳು ಹೆಚ್ಚಿವೆ. ಸರ್ಕಾರ ಅಂಗಡಿ ಬಂದ್‌ಗೆ ಕಠಿಣ ಕ್ರಮ ಕೈಗೊಳ್ಳಬೇಕು. ಈ ಬಗ್ಗೆ ಸರ್ಕಾರದ ಜೊತೆ ಮಾತನಾಡುವಂತೆ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಅವರಿಗೂ ಸೂಚಿಸಿದರು.

ಆಹಾರ ಪದಾರ್ಥದಲ್ಲಿ ನಾವು ಕಟ್ಟುನಿಟ್ಟು ಪಾಲಿಸುತ್ತೇವೆ. ಸನಾತನ ಧರ್ಮಕ್ಕು ಜೈನ ಧರ್ಮಕ್ಕು ಆಹಾರದಲ್ಲಿ ಸಾಮ್ಯತೆ ಇದೆ. ರಾಜಭವನಕ್ಕೆ ಯಾರೇ ಬಂದರು ಸಸ್ಯಾಹಾರ ಊಟವನ್ನೇ ನೀಡುತ್ತೇವೆ. ರಾಜಭವನದಲ್ಲಿ ಮಾಂಸಾಹಾರ ಸಂಪೂರ್ಣ ನಿಷೇಧಿಸಲಾಗಿದೆ ಎಂದರು.

ಇದೇ ವೇಳೆ ತಮ್ಮ ಇಬ್ಬರು ಮೊಮ್ಮಕ್ಕಳಿಗೆ ಜೈನ ಧರ್ಮದ ಹೆಣ್ಣು ಮಕ್ಕಳನ್ನು ಮದುವೆ ಮಾಡಿಕೊಂಡಿರುವ ವಿಚಾರ ತಿಳಿಸಿದ ಅವರು ಸನಾತನ ಮತ್ತು ಜೈನ ಧರ್ಮ ಸಾಮ್ಯತೆ ಹೊಂದಿವೆ ಎಂದು ಪ್ರತಿಪಾದಿಸಿದರು.

ಶ್ರೀ ಕ್ಷೇತ್ರ ಶ್ರವಣಬೆಳಗೊಳವು ಭಾರತದ ಐತಿಹಾಸಿಕ, ಸಾಂಸ್ಕೃತಿಕ ಮತ್ತು ಭೌಗೋಳಿಕ ಏಕತೆಯ ಪ್ರಬಲ ಮತ್ತು ಪ್ರಾಚೀನ ಕೇಂದ್ರವಾಗಿದೆ. ಆಚಾರ್ಯ ಭದ್ರಬಾಹು ಅವರು ಮಧ್ಯಪ್ರದೇಶದ ಉಜ್ಜಯಿನಿ ಪ್ರದೇಶದಿಂದ ಸ್ವಪ್ರೇರಣೆಯಿಂದ ಬರಗಾಲದ ವೇಳೆ ಇಲ್ಲಿಗೆ ಬಂದರು. ಅವರ ಶಿಷ್ಯ ಚಕ್ರವರ್ತಿ ಚಂದ್ರಗುಪ್ತ ವಿಶಾಲವಾದ ಮೌರ್ಯ ಸಾಮ್ರಾಜ್ಯದ ಸ್ಥಾಪಕ ಸಹ ಜೊತೆಗಿದ್ದರು. ಅಧಿಕಾರದ ಪರಾಕಾಷ್ಠೆಯಲ್ಲಿದ್ದ ಚಕ್ರವರ್ತಿ ಚಂದ್ರಗುಪ್ತ ತನ್ನ ಮಗ ಬಿಂದುಸಾರನಿಗೆ ಇಡೀ ರಾಜ್ಯವನ್ನು ಒಪ್ಪಿಸಿ ಚಂದ್ರಗಿರಿ ಪರ್ವತದಲ್ಲಿ ದಿಗಂಬರ ಸಾಧನವನ್ನು ಮಾಡಿ ಸಮಾಧಿ ಪಡೆದರು. ಶಾಂತಿ, ಅಹಿಂಸೆ, ಕರುಣೆ ಮತ್ತು ಪರಿತ್ಯಾಗವನ್ನು ಪೋಷಿಸಿದ ಜೈನ ಧರ್ಮದ ಸಂಪ್ರದಾಯವು ಈ ಪ್ರದೇಶದಲ್ಲಿ ವಿಸ್ತರಿಸಿತು. ಕಾಲಾನಂತರದಲ್ಲಿ ಪ್ರದೇಶವು ದಕ್ಷಿಣ ಮತ್ತು ಉತ್ತರದ ನಡುವಿನ ಸಾಂಸ್ಕೃತಿಕ ಸಮನ್ವಯದ ಕೇಂದ್ರವಾಗಿ ಗುರುತಿಸಲ್ಪಟ್ಟಿತು ಎಂದರು.



### ರಾಜಭವನದಲ್ಲೂ ಸಸ್ಯಾಹಾರ ಕಡ್ಡಾಯಗೊಳಿಸಲಾಗಿದೆ

ಶ್ರವಣಬೆಳಗೊಳ ಮಠದ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಮಾತನಾಡಿ, ಭಾರತದಲ್ಲಿ ಅನೇಕ ಧರ್ಮಗಳಿದ್ದರೂ ಎಲ್ಲದರ ಉದ್ದೇಶ ಮೋಕ್ಷ ಸಾಧನೆಯೇ ಆಗಿದೆ. ಭಗವಾನ್ ಮಹಾವೀರ, ಶ್ರೀ ರಾಮ, ಕೃಷ್ಣ ಅನೇಕರು ಮೋಕ್ಷದ ದಾರಿಯನ್ನು ಹೇಳಿಕೊಟ್ಟಿದ್ದಾರೆ ಎಂದರು.

ನೀನು ಜೀವಿಸು, ಇತರರಿಗೂ ಜೀವಿಸಲು ಬಿಡು, ಸುಳ್ಳು ಮಾತನಾಡಬೇಡ, ಪರೋಪಕಾರಿಯಾಗು ಎಂಬ ಸಂದೇಶಗಳ ಮೂಲಕ ಮಹಾವೀರರು ಅಹಿಂಸೆ ಹಾಗೂ ಅನೇಕಾಂತ ತತ್ವಗಳನ್ನು ಪ್ರತಿಪಾದಿಸಿದರು. ಅದೇ ದಾರಿಯಲ್ಲಿ ಯುವ ಸಮಾಜ ಸಾಗಬೇಕು ಎಂದು ಹೇಳಿದರು.

ಹಿಂಸೆ ಮಾಡಬಾರದು ಎಂಬುದು ನಮ್ಮ ಧರ್ಮದ ಪರಿಪಾಲನೆ. ಆದ್ದರಿಂದ ಶ್ರೀ ಕ್ಷೇತ್ರದ ಸುತ್ತಲು ಮಾಂಸದಗಂಡಿಗಳನ್ನು ಬಂದ್ ಮಾಡಬೇಕೆಂದು ಕೋರಲಾಗಿದೆ. ರಾಜ್ಯಪಾಲರು ಅದಕ್ಕೆ ದನಿಗೂಡಿಸಿದ್ದು ನಮ್ಮ ಬೇಡಿಕೆಗೆ ಶಕ್ತಿ ಬಂದಿದೆ ಎಂದು ಶ್ರೀಗಳು ಹೇಳಿದರು.

ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ. ಸುಧಾಕರ್ ಮಾತನಾಡಿ, ಉತ್ತರ ಹಾಗೂ ದಕ್ಷಿಣ ಭಾರತದ ಜೈನ ಪರಂಪರೆಯನ್ನು ಪ್ರತಿನಿಧಿಸುವ ಶ್ರವಣಬೆಳಗೊಳ ಕ್ಷೇತ್ರ ಅಭಿವೃದ್ಧಿಯಲ್ಲಿ ಜಿನೈಕ್ಯ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಕೊಡುಗೆ ಅಪಾರವಾಗಿದೆ ಎಂದು ಅವರು ಹೇಳಿದರು.

### ಸಂಸ್ಕೃತಿ ಬೆಸೆದ ಕೇಂದ್ರ

ಶಾಂತಿ, ಅಹಿಂಸೆ ಮತ್ತು ಕರುಣೆಯ ಪ್ರತೀಕವಾದ ಭಗವಾನ್ ಬಾಹುಬಲಿಯ ಭವ್ಯ ಮೂರ್ತಿಯ ಆರಾಧನಾ ಸ್ಥಳವಾದ ಶ್ರವಣಬೆಳಗೊಳ ಕ್ಷೇತ್ರವು ಧರ್ಮ, ಆಧ್ಯಾತ್ಮಿಕತೆ ಮತ್ತು ಭಾರತೀಯ ಸಂಸ್ಕೃತಿಯನ್ನು ಬೆಸೆದ ವಿಶಿಷ್ಟ ಕೇಂದ್ರವಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಬಣ್ಣಿಸಿದರು.

ಜೈನ ಧರ್ಮ ಎಂದರೆ ಜಿನ ಮಾರ್ಗ ಎಂದರ್ಥ. ಅಂದರೆ ತನ್ನನ್ನು ತಾನು ಗೆದ್ದವನ ಮಾರ್ಗ. ಭಾರತವು ಇತರ ದೇಶಗಳನ್ನು ವಶಪಡಿಸಿಕೊಳ್ಳಲು ಎಂದಿಗೂ ಆಕ್ರಮಣ ನೀತಿ ಅನುಸರಿಸಿಲ್ಲ. ನಮ್ಮನ್ನು ನಾವು ಸುಧಾರಿಸಿಕೊಳ್ಳುವ ಮೂಲಕ ನಮ್ಮ ನ್ಯೂನತೆಗಳನ್ನು ನಿವಾರಿಸಿಕೊಂಡಿದ್ದೇವೆ. ಭಗವಾನ್ ಮಹಾವೀರ ಮತ್ತು ಭಗವಾನ್ ಬಾಹುಬಲಿ ರಾಜಮನೆತನದ ರಾಜಕುಮಾರರಾಗಿದ್ದರು. ಆದರೆ ಅವರು ಎಲ್ಲವನ್ನೂ ತ್ಯಜಿಸಿದರು, ತಪಸ್ಸಿನ ಮಾರ್ಗವನ್ನು ಅಳವಡಿಸಿಕೊಂಡರು ಮತ್ತು ಮಾನವ ಕುಲದ ಕಲ್ಯಾಣಕ್ಕಾಗಿ ಶ್ರಮಿಸಿದರು. ಈ ಮಹಾಪುರುಷರಿಬ್ಬರೂ ತಮಗಾಗಿ ಯೋಚಿಸದೆ ಎಲ್ಲರಿಗಾಗಿ ಚಿಂತಿಸಿ, ತಮ್ಮ ಧ್ಯಾನವನ್ನು ಎಲ್ಲರ ಕಲ್ಯಾಣಕ್ಕಾಗಿ ಮೀಸಲಿಟ್ಟಿದ್ದರು ಎಂದರು.

ನಮ್ಮ ಕುಟುಂಬಕ್ಕೂ ಭಟ್ಟಾರಕ ಸ್ವಾಮೀಜಿ ಅವರಿಗೂ ಅವಿನಾಭಾವ ಸಂಬಂಧವಿತ್ತು. ನಮ್ಮ ಚಿಕ್ಕಪ್ಪ ವಾರಕ್ಕೆ ಒಮ್ಮೆಯಾದರೂ ಇಲ್ಲಿಗೆ ಭೇಟಿ ನೀಡುತ್ತಿದ್ದರು. ನಾನು ಸಹ ಮಠದ ಭಕ್ತನಾಗಿ ಬರುತ್ತೇನೆ. ಕ್ಷೇತ್ರದ ಅಭಿವೃದ್ಧಿಗೆ ಕೈಲಾದ ಸಹಾಯ ಮಾಡುತ್ತೇನೆ ಎಂದರು.

ಹಿಂದೂ ಧರ್ಮಕ್ಕಿಂತಲೂ ಹಳೆಯದಾದ ಜೈನ ಧರ್ಮವು ತನ್ನದೇಯಾದ ಛಾಪು ಮೂಡಿಸಿದೆ. ಅಹಿಂಸೆ ಪರಿಪಾಲನೆ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿದೆ. ಮಹಾತ್ಮ ಗಾಂಧೀಜಿ ಅವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಹಿಂಸೆ ಮಾರ್ಗ ಪ್ರತಿಪಾದಿಸಲು ಮಹಾವೀರರ ತತ್ವಾದರ್ಶಗಳೇ ಪ್ರೇರಣೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಕರ್ನಾಟಕದ ಸ್ವಾರ್ಥ ರಹಿತ ಕ್ಷೇತ್ರಗಳೆಂದರೆ ಶ್ರವಣಬೆಳಗೊಳ ಮತ್ತೊಂದು ಧರ್ಮಸ್ಥಳ ಎಂದರು.



ಡಾ. ವೀರೇಂದ್ರ ಹೆಗ್ಗಡೆ ಹಾಗೂ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಸಮಾಜಕ್ಕೆ ತಮ್ಮದೇಯಾದ ಕೊಡುಗೆ ನೀಡಿದ್ದಾರೆ. ಈಗಿನ ಸ್ವಸ್ತಿಶ್ರೀ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರು ಸಹ ಕ್ಷೇತ್ರ ಅಭಿವೃದ್ಧಿ ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆ ಎಂದರು.

ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಗೆ ಶ್ರವಣಬೆಳಗೊಳ ಕ್ಷೇತ್ರವನ್ನು ಸೇರಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಈಗಾಗಲೇ ಕೇಂದ್ರ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. ನಾನು ಕೂಡ ರಾಜ್ಯಸಭೆ ಸದಸ್ಯ ಹೆಚ್.ಡಿ. ದೇವೇಗೌಡ ಅವರ ಮೂಲಕ ಆ ನಿಟ್ಟಿನಲ್ಲಿ ಪ್ರಯತ್ನ ಮುಂದುವರೆಸುತ್ತೇನೆ ಎಂದು ಭರವಸೆ ನೀಡಿದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಶ್ರೀ ಕ್ಷೇತ್ರಕ್ಕೆ ಬಂದಿರುವುದು ಜೈನ ಮಠದ ಪರಂಪರೆಗೆ ಸಾಕ್ಷಿಯಾಗಿದೆ. ಅಹಿಂಸೆ ಮೂಲಕ ಒಳ್ಳೆಯ ಬದುಕು ಕಟ್ಟಿಕೊಳ್ಳಬಹುದು ಎಂದು ಪ್ರತಿಪಾದಿಸಿದ ಭಗವಾನ್ ಮಹಾವೀರರ ತತ್ವಾದರ್ಶಗಳನ್ನು ಎಲ್ಲರೂ ಪಾಲಿಸಬೇಕು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮಾತನಾಡಿದರು. ಶ್ರವಣಬೆಳಗೊಳ ಗ್ರಾಮ ಪಂಚಾಯಿತಿ ಅಧ್ಯಕ್ಷ ಅಪ್ಸಾರ್ ಪಾಷ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಮತ್ತಿತರರಿದ್ದರು.

# ಮೈತ್ರಿ ಭವಿಷ್ಯ ಬಿಜೆಪಿಯವರೇ ಹೇಳಬೇಕು



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಬಿಜೆಪಿಯವರು ನಮ್ಮನ್ನು ಹೇಗೆ ನೋಡಿಕೊಳ್ಳುತ್ತಾರೆ ಎನ್ನುವುದರ ಮೇಲೆ ಮೈತ್ರಿ ಭವಿಷ್ಯ ನಿಂತಿದೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿ, ರಾಷ್ಟ್ರ ಹಾಗೂ ರಾಜ್ಯದಲ್ಲಿ ಬಿಜೆಪಿ-ಜೆಡಿಎಸ್ ಮೈತ್ರಿ ಗಟ್ಟಿಗೊಳ್ಳುತ್ತಿದೆ. ಬಿಜೆಪಿಯವರು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದರ ಮೇಲೆ ಮೈತ್ರಿ ಭವಿಷ್ಯ ನಿಂತಿದೆ. ಪ್ರಧಾನಿ ಮೋದಿ ಬಗ್ಗೆ ನಮಗೆ ಅಪಾರ ಗೌರವಿದೆ. ಆದರೆ ರಾಜ್ಯ ಬಿಜೆಪಿ ಬಗ್ಗೆ ಸ್ವಲ್ಪ ಅಸಮಾಧಾನವಿದೆ ಎಂದರು.

ಸಿದ್ಧಾಂತ, ಬದ್ಧತೆ ಇಲ್ಲದ ಕಾಂಗ್ರೆಸ್ ಪಕ್ಷದೊಂದಿಗೆ ನಮ್ಮ ಸದಸ್ಯರು ಹೊಂದಾಣಿಕೆ ಮಾಡಿಕೊಂಡಿದ್ದರೆ ಯಾವ ಕಾರಣಕ್ಕೂ ಸಹಿಸುವುದಿಲ್ಲ. ಶೀಘ್ರ ಪುರಸಭೆ ಸದಸ್ಯರೊಂದಿಗೆ ಮಾತುಕತೆ ನಡೆಸುತ್ತೇನೆ ಎಂದು ಹೇಳಿದರು.

ಜಿಲ್ಲೆಗೆ ಬಿಜೆಪಿ ಹಾಗೂ ಕಾಂಗ್ರೆಸ್ ಕೊಡುಗೆ ಶೂನ್ಯ. ನಾನು ಮಂತ್ರಿಯಾಗಿದ್ದ ಅವಧಿಯಲ್ಲಿ ಕೆಲಸಗಳಾಗಿದ್ದು ಬಿಟ್ಟರೆ ಅನ್ಯ ಸರ್ಕಾರಗಳಲ್ಲಿ ಯಾವುದೇ ಅಭಿವೃದ್ಧಿಯಾಗಿಲ್ಲ. ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಅವರು ಇಳಿವಯಸ್ಸಿನಲ್ಲಿ ಕೇಂದ್ರ ಸಚಿವರೊಂದಿಗೆ ಸಂಪರ್ಕ ಸಾಧಿಸಿ ಕೋಟ್ಯಂತರ ರೂಪಾಯಿ ಅನುದಾನ ತಂದು ಜಿಲ್ಲೆಗೆ ಅನುಕೂಲ ಮಾಡಿಕೊಟ್ಟಿದ್ದಾರೆ ಎಂದು ಹೇಳಿದರು.

ಮುಂಬರುವ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿ ಜೊತೆಗೆ ಮೈತ್ರಿ ಮುಂದುವರಿಯಲಿದೆ. ಯಾವ ಕಾರಣಕ್ಕೂ ಕಾಂಗ್ರೆಸ್ ಸಹವಾಸ ಮಾಡುವುದಿಲ್ಲ. ಕಾಂಗ್ರೆಸ್ಸಿಗರು ಜೆಡಿಎಸ್ ಅನ್ನು ಮುಗಿಸುವ ಯೋಚನೆಯಲ್ಲಿದ್ದಾರೆ. ಈ ದುಷ್ಟ ಬುದ್ಧಿ ಬಿಟ್ಟು ರಾಜ್ಯದ ಅಭಿವೃದ್ಧಿ ಕಡೆಗೆ ಗಮನ ಕೊಡಲಿ ಎಂದು ತಿರುಗೇಟು ನೀಡಿದರು.


ತಾಲ್ಲೂಕು ಜೆಡಿಎಸ್ ಅಧ್ಯಕ್ಷ ತೊ.ಚ. ಅನಂತಸುಬ್ಬರಾಯು, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಡಿ. ಚಂದ್ರೇಗೌಡ, ಹೆಚ್‌ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಎಂ.ಎ. ನಾಗರಾಜ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಬಾಣಸವಳ್ಳಿ ಆಶ್ವತ್ಥ್, ಜೆಡಿಎಸ್ ಮುಖಂಡ ಎಂ.ಕೆ.ಆರ್. ಸೋಮೇಶ್ ಇತರರಿದ್ದರು.

# ವೈಭವದ ಚನ್ನಕೇಶವ ಸ್ವಾಮಿ ಬ್ರಹ್ಮ ರಥೋತ್ಸವ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಪಟ್ಟಣದ ಶ್ರೀ ಚನ್ನಕೇಶವಸ್ವಾಮಿ ಬ್ರಹ್ಮ ರಥೋತ್ಸವ ಗುರುವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಅರ್ಥಪೂರ್ಣವಾಗಿ ನೆರವೇರಿತು.

ಬೆಳಿಗ್ಗೆ ಗರ್ಭಗುಡಿಯಲ್ಲಿ ಚೆಲುವ ಚನ್ನಿಗನಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ದಿವ್ಯ ರಥ, ದೇವರನ್ನು ಸ್ಥಾಪಿಸುವ ಕೇಸರಿ ಮಂಟಪ ಹಾಗೂ ದೇವಸ್ಥಾನದ ಸುತ್ತಲಿನ ದೇಗುಲಗಳಿಗೆ ಪೂಜೆ ಮತ್ತು ಬಲಿ ಪ್ರಧಾನ ಕಾರ್ಯ ನಡೆಸಲಾಯಿತು. ಯಾಗ ಶಾಲೆಯಲ್ಲಿ ವಿಶೇಷ ವಿಧಿ ವಿಧಾನ ಕ್ರಮಗಳನ್ನು ಜರುಗಿಸಿದ ನಂತರ ನವರಂಗದಲ್ಲಿ ಉತ್ಸವಕ್ಕೆ ಸಜ್ಜುಗೊಳಿಸಿದ್ದ ಚೆಲುವ ಚನ್ನಿಗ, ರಂಗನಾಯಕಿ ಹಾಗೂ ಸೌಮ್ಯ ನಾಯಕಿ ಮೂರ್ತಿಗಳಿಗೆ ವಿಶೇಷ ಪೂಜೆ ಮತ್ತು ಯಾತ್ರಾದಾನ ನೆರವೇರಿತು. ಕೃಷ್ಣ ಗಂಧೋತ್ಸವ ಕಾರ್ಯಕ್ರಮವನ್ನು ನಡೆಸಿದ ನಂತರ ಸ್ಥಳೀಯ ವಿಪ್ರ ಬಂಧುಗಳು ದೇವಸ್ಥಾನದ ಅಷ್ಟಬೀದಿಗಳಲ್ಲಿ ವೇದಘೋಷ ಮತ್ತು ಗೋವಿಂದ ನಾಮಸ್ಮರಣೆ ಮಾಡುವ ಮೂಲಕ ಉತ್ಸವ ನಡೆಸಿದರು.



ನಂತರ ಕೇಸರಿ ಮಂಟಪದಲ್ಲಿ ದೇವರನ್ನು ಸ್ಥಾಪನೆ ಮಾಡಿ ಬಾಳೆ ಕಂದು ಕಡಿದು ಬಲಿ ಪ್ರಧಾನ ನೆರವೇರಿಸಲಾಯಿತು. ರಥದಲ್ಲಿ ದೇವರನ್ನು ಸ್ಥಾಪನೆಗೊಳಿಸಿ, ವಿಶೇಷ ಪೂಜೆ ನಡೆಸಿದ ನಂತರ ರಥ ಎಳೆಯುವ ವಿಧಿ-ವಿಧಾನ ಕಾರ್ಯವನ್ನು ನಡೆಸಲಾಯಿತು.

ಬೆಳಿಗ್ಗೆ 10.30ರಿಂದ 11ರ ಶುಭ ಮುಹೂರ್ತದಲ್ಲಿ ಚನ್ನಕೇಶವಸ್ವಾಮಿ ದಿವ್ಯ ರಥಾರೋಹಣ ಸಕಲ ಸಿದ್ಧತೆಯ ನಡುವೆಯೇ ಸಂಪ್ರದಾಯದಂತೆ, ವೇದ ಘೋಷಗಳ ನಡುವೆ ರಥ ಎಳೆಯುವ ಕಾರ್ಯಕ್ಕೆ ಚಾಲನೆ ನೀಡಲಾಯಿತು.

ಬಾನಂಗಳದಲ್ಲಿ ವಿಷ್ಣು ವಾಹನ ಗರುಡ ಪ್ರದಕ್ಷಿಣೆ ಹಾಕುತ್ತಿದ್ದಂತೆ ಶಾಸಕ ಹೆಚ್.ಕೆ. ಸುರೇಶ್, ಪುರಸಭಾಧ್ಯಕ್ಷ ಎ.ಆರ್. ಅಶೋಕ್, ಅಪರ ಜಿಲ್ಲಾಧಿಕಾರಿ, ದೇಗುಲ ಆಡಳಿತಾಧಿಕಾರಿ ಶಾಂತಲಾ, ತಹಶೀಲ್ದಾರ್ ಎಂ. ಮಮತ, ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎನ್. ಯೋಗೇಶ್ ಮತ್ತಿತರ ಗಣ್ಯರು ಪೂಜೆ ಸಲ್ಲಿಸಿದ ಬಳಿಕ ಭಕ್ತರ ಹರ್ಷೋದ್ಗಾರದೊಂದಿಗೆ ರಥ ಸಾಗಿತು.

ರಾಜರ ಆಳ್ವಿಕೆಯಲ್ಲಿ ಆರಂಭಗೊಂಡ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬಂದಿದ್ದು, ರಥೋತ್ಸವದ ಮೊದಲ ದಿನವಾದ ಗುರುವಾರ ಗಳಿಗೆ ತೇರು ಈಶಾನ್ಯ ಮೂಲೆಯಿಂದ ಅಲಂಕೃತ ರಥದಲ್ಲಿ ಚನ್ನಕೇಶವನನ್ನು ಕೂರಿಸಿ, ಆಗ್ನೇಯ ದಿಕ್ಕಿನ ಮೂಲೆವರಗೆ ಎಳೆದು ತಂದು ನಿಲ್ಲಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಮಾಜಿ ಸಂಸದ ಬಿ. ಶಿವರಾಮ್, ಸೇರಿದಂತೆ ನ್ಯಾಯಾಧೀಶರು, ಜನಪ್ರತಿನಿಧಿಗಳು, ಅಧಿಕಾರಿಗಳು ದರ್ಶನ ಪಡೆದರು.

ರಥೋತ್ಸವ ಮುಗಿಯುತ್ತಿದ್ದಂತೆ ಭಕ್ತರು ದೇಗುಲದತ್ತ ಹೆಜ್ಜೆ ಹಾಕಿದರು. ವಿದೇಶಿ ಪ್ರವಾಸಿಗರು ಆಗಮಿಸಿ ಗಂಟೆಗಟ್ಟಲೇ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಪುಳಕಿತಗೊಂಡರು. ದೇಗುಲಕ್ಕೆ ತೆರಳುವ ಮಾರ್ಗದ ಉದ್ದಕ್ಕೂ ನಾನಾ ಸಂಘಟನೆಗಳು ಭಕ್ತರಿಗೆ ಉಚಿತವಾಗಿ ಮಜ್ಜಿಗೆ ಹಾಗು ತಂಪು ಪಾನಿಯ ವಿತರಿಸಿದರು. ಸಿಪಿಐ ರೇವಣ್ಣ ಅವರ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಥೋತ್ಸವಕ್ಕೂ ಮೊದಲು ಮುಸ್ಲಿಂ ಸಮುದಾಯದಿಂದ ನಡೆಯುವ ಖುರಾನ್ ಪಠಣ ನಿಲ್ಲಿಸಬೇಕೆಂದು ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. ಆದರೆ ಅಧಿಕಾರಿಗಳು ಅದಕ್ಕೆ ಅವಕಾಶ ಕಲ್ಪಿಸದೆ ಸಂಪ್ರದಾಯ ಮುಂದುವರೆಸಿದರು.

# ಪಿಯುಸಿ ಫಲಿತಾಂಶ

## ಮಾಸ್ಟರ್ಸ್ ಕಾಲೇಜು ಪಾರುಪತ್ಯ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಈ ಬಾರಿಯ ಪಿಯುಸಿ ಪರೀಕ್ಷೆಯಲ್ಲಿ ನಗರದ ಹೆಸರಾಂತ ಮಾಸ್ಟರ್ಸ್ ಪಿಯು ಕಾಲೇಜು ತನ್ನ ಪಾರುಪತ್ಯ ಮುಂದುವರಿಸಿದೆ.

ಎನ್.ಜೆ. ಪ್ರಣತಿ ಅವರು 600ಕ್ಕೆ 597(ಶೇ.99.50) ಅಂಕ ಪಡೆದು ರಾಜ್ಯಕ್ಕೆ ಮೂರನೇ ರ‍್ಯಾಂಕ್ ಹಾಗೂ ಇಡೀ ಜಿಲ್ಲೆಗೆ ಟಾಪರ್ ಆಗಿ ಹೊರ ಹೊಮ್ಮಿದ್ದಾರೆ. ಪಿಸಿಎಂಬಿ ವಿಷಯಗಳಲ್ಲಿ ಔಟ್ ಆಫ್ ಔಟ್ ಅಂಕ ಗಳಿಸಿದ್ದಾರೆ.

ಮತ್ತಿಬ್ಬರು ವಿದ್ಯಾರ್ಥಿಗಳಾದ ಎಸ್. ಪ್ರೀತಂ ಹಾಗೂ ಪ್ರೀತಂ ವೈ. ಆರಾಧ್ಯ 600ಕ್ಕೆ 594 (ಶೇ.99) ಸಮಾನ ಅಂಕ ಪಡೆದಿದ್ದಾರೆ. ಈ ಇಬ್ಬರೂ ಜಿಲ್ಲೆಗೆ ಎರಡನೇ ಟಾಪರ್ ಆಗಿದ್ದಾರೆ. ಅಲ್ಲದೆ ಕೆ.ಆರ್. ಪದವಿ 600ಕ್ಕೆ 592, ವಿ. ಪುನರ್ವ ಮತ್ತು ಡಿ.ಹೆಚ್. ಗಗನ್ ತಲಾ 590 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ.



ಪಿಯುಸಿ ಪರೀಕ್ಷೆಯಲ್ಲಿ ಪ್ರಶಂಸನೀಯ ಸಾಧನೆ ಮಾಡಿರುವ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿ ನಿರ್ದೇಶಕರು, ಪ್ರಾಂಶುಪಾಲರು ಹಾರ್ದಿಕ ಅಭಿನಂದನೆ ಸಲ್ಲಿಸಿ ಶುಭ ಕೋರಿದ್ದಾರೆ. ಒಟ್ಟಿನಲ್ಲಿ ಕಳೆದ ಹಲವು ವರ್ಷಗಳಿಂದಲೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಮಾಸ್ಟರ್ಸ್ ಕಾಲೇಜಿನ ವಿದ್ಯಾರ್ಥಿಗಳು ರಾಜ್ಯಮಟ್ಟದ ರ‍್ಯಾಂಕ್ ಪಡೆಯುವುದರ ಜೊತೆಗೆ ಜಿಲ್ಲಾ ಮಟ್ಟದಲ್ಲಿ ಮೊದಲ ಸ್ಥಾನವನ್ನು ಕಾಲೇಜಿಗೆ ತಂದುಕೊಡುತ್ತಿರುವುದು ನಿಜಕ್ಕೂ ಪರಿಣಾಮಕಾರಿ ಬೋಧನೆಗೆ ಹಿಡಿದ ಕೈಗನ್ನಡಿಯಾಗಿದೆ.

# ವಿದ್ಯುತ್ ಸ್ಪರ್ಶ: ಮರಗೆಲಸ ಮಾಡುತ್ತಿದ್ದ ಇಬ್ಬರು ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕಿನ ಗರಿಘಟ್ಟ ಗ್ರಾಮದಲ್ಲಿ ಗುರುವಾರ ಹೊಸ ಮನೆಯ ಮರಗೆಲಸ ಮಾಡುತ್ತಿದ್ದ ಯುವಕರಿಬ್ಬರು ಆಕಸ್ಮಿಕ ವಿದ್ಯುತ್ ಸ್ಪರ್ಶದಿಂದ ಮೃತಪಟ್ಟಿದ್ದಾರೆ.


ತಾಲ್ಲೂಕಿನ ಹುಲ್ಲಿಕಲ್ ಸಿದ್ದಾಪುರ ಗ್ರಾಮದ ಸೃಜನ್ (19) ಹಾಗೂ ಪಟ್ಟಣದ ಶುಭಾಷ್ ನಗರದ ಸಂಜಯ್ (19) ಮೃತರು. ಗರಿಘಟ್ಟದ ಮಹೇಂದ್ರ ಎಂಬುವರು ನೂತನ ಮನೆ ನಿರ್ಮಾಣ ಮಾಡಿದ್ದು ಗೃಹಪ್ರವೇಶ ಹಿನ್ನೆಲೆಯಲ್ಲಿ ಮನೆಯ ಬಾಗಿಲು, ಕಿಟಕಿ ಕೆಲಸದಲ್ಲಿ ತೊಡಗಿದ್ದ ವೇಳೆ ಅವಘಡ ಸಂಭವಿಸಿದೆ.

ಸೃಜನ್ ಬಾಗಿಲು ಕೆಲಸದಲ್ಲಿ ತೊಡಗಿದ್ದ ವೇಳೆ ವಿದ್ಯುತ್ ತಂತಿ ತಗುಲಿ ನೆಲಕ್ಕೆ ಬಿದ್ದು ಹೊರಳಾಡುವ ವೇಳೆ ಹತ್ತಿರದಲ್ಲಿಯೇ ಇದ್ದ ಸಂಜಯ್ ರಕ್ಷಣೆ ಮಾಡಲು ಬಂದಾಗ ಆತನಿಗೂ



ವಿದ್ಯುತ್ ಪ್ರಸರಿಸಿದೆ. ಸಮೀಪದಲ್ಲಿದ್ದ ಮನೆಯವರು ಬಾಗಿಲು ಮುಂದೆ ಮಲಗಿರುವ ಯುವಕನನ್ನು ನೋಡಲು ಗಾಬರಿಯಿಂದ ಓಡಿಬಂದಾಗ ಮತ್ತೊಬ್ಬ ಬಾಗಿಲ ಒಳಗೆ ಮಲಗಿರುವುದು ಕಂಡು ಕೂಗಿದ್ದಾರೆ. ಗ್ರಾಮಸ್ಥರು ಇಬ್ಬರ ಕೈಯಲ್ಲಿ ಇದ್ದ ವಿದ್ಯುತ್ ತಂತಿಯನ್ನು ಕಂಡು ಬಳಿಕ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ. ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಅರಕಲಗೂಡು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

# ಸಾರಿಗೆ ಬಸ್ ಪ್ರಯಾಣಕ್ಕೆ ಶಾಸಕರ ಸಲಹೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಪರಿಸರ ಸಂರಕ್ಷಣೆ ಹಾಗೂ ಆರ್ಥಿಕ ಕಾರಣಗಳಿಂದ ಸಾರ್ವಜನಿಕರು ಸಾಧ್ಯವಾದಷ್ಟು ಸಾರಿಗೆ ಬಸ್ಸುಗಳಲ್ಲಿಯೇ ಸಂಚರಿಸಬೇಕು ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಗಿರೀಕ್ಷೇತ್ರ ಗ್ರಾಮದಲ್ಲಿ ಚನ್ನರಾಯಪಟ್ಟಣ ಘಟಕದಿಂದ ತುರುವೇಕೆರೆಗೆ ಆರಂಭವಾದ ಸಾರಿಗೆ ಬಸ್‌ಗೆ ಚಾಲನೆ ನೀಡಿ ಮಾತನಾಡಿದರು.

ಸರ್ಕಾರಿ ಬಸ್‌ಗಳಲ್ಲಿ ಸಂಚರಿಸುವುದರಿಂದ ಸುರಕ್ಷಿತ ಸಂಚಾರದ ಜೊತೆಗೆ ಸರ್ಕಾರಕ್ಕೂ ಆದಾಯ ಬರಲಿದೆ ಎಂದರು.

ಚನ್ನರಾಯಪಟ್ಟಣದಿಂದ ಬೆಳಗ್ಗೆ 9.45 ಗಂಟೆಗೆ ಬಸ್ ಹೊರಡಲಿದ್ದು ನುಗ್ಗೇಹಳ್ಳಿ, ಗಿರೀಕ್ಷೇತ್ರ, ದಿಡಗ ಮಾರ್ಗ ಪಕ್ಕದ ತಾಲ್ಲೂಕು ಕೇಂದ್ರ ತುರುವೇಕೆರೆಗೆ 11.20 ರ ಸುಮಾರಿಗೆ ತಲುಪಲಿದ್ದು ಮತ್ತೇ ವಾಪಸ್ ಇದೇ ರೂಟಿನಲ್ಲಿ ಚನ್ನರಾಯಪಟ್ಟಣಕ್ಕೆ ಹಿಂದಿರುಗಲಿದೆ ಎಂದು ತಿಳಿಸಿದರು.




Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248